ಜಿಲ್ಲಾಧಿಕಾರಿ ಹಾಗೂ
ಜಿಲ್ಲಾ ದಂಡಾಧಿಕಾರಿಯವರ ಕಾರ್ಯಾಲಯ
ಉಡುಪಿ ಜಿಲ್ಲೆ, "ರಜತಾದ್ರಿ"
ಮಣಿಪಾಲ, ಉಡುಪಿ – 576104
Email: udupidc@gmail.com

( ಕಂದಾಯ ಇಲಾಖೆ )

Deputy Commissioner &
District Magistrate's Office,
Udupi District, " Rajatadri",
Manipal, Udupi - 576104
Office: 0820-2574924, 2574925

DCU/KLLADS MLA 184/207-18/85286/13273 ದಿನಾಂಕ: 19-09-2022

# ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ, ಉಡುಪಿ ಇವರ ನಡವಳಿ

ವಿಷಯ: ಸಂಸತ್ ಸದಸ್ಯರ ಹಾಗೂ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಹಾಗೂ ಪ್ರಾಕೃತಿಕ ವಿಕೋಪ ನಿಧಿಯಡಿಯಲ್ಲಿ ಕೈಗೊಳ್ಳಬಹುದಾದ ಕಾಮಗಾರಿಗಳ ಮತ್ತು ಜಿಲ್ಲಾಧಿಕಾರಿಗಳಿಂದ ಆಡಳಿತ ಅನುಮೋದನೆ ಪಡೆಯುವ ಕಾಮಗಾರಿಗಳ 3rd Party Inspection ಗಾಗಿ ನೇಮಿಸುವ ಕುರಿತು.

ಉಲ್ಲೇಖ: 1) ಸರ್ಕಾರದ ಅಧೀನ ಕಾರ್ಯದರ್ಶಿ, ಕರ್ನಾಟಕ ಸರ್ಕಾರದ ಸಚಿವಾಲಯ, ವಿಕಾಸಸೌಧ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ : ನಅಇ:21 : ಜಿಇಎಲ್ 2009 ಬೆಂಗಳೂರು ದಿನಾಂಕ 11.02.2009

2) ದಿನಾಂಕ: 16.09.2022 ರಂದು ನಡೆದ ಸಭೆಯ ನಿರ್ಣಯ

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸಂಸತ್ ಸದಸ್ಯರ ಹಾಗೂ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಹಾಗೂ ಪ್ರಾಕೃತಿಕ ವಿಕೋಪ ನಿಧಿಯಡಿಯಲ್ಲಿ ಕೈಗೊಳ್ಳಬಹುದಾದ ಕಾಮಗಾರಿಗಳ ಮತ್ತು ಜಿಲ್ಲಾಧಿಕಾರಿಗಳಿಂದ ಆಡಳಿತ ಅನುಮೋದನೆ ಪಡೆಯುವ ಕಾಮಗಾರಿಗಳ 3rd Party Inspection ಗಾಗಿ ನೇಮಿಸುವ ಕುರಿತು ನಿರ್ಣಯಿಸಲಾಗಿದೆ. ಕಾರಣ ಸದ್ರಿ ಕಾಮಗಾರಿಗಳ ಗುಣಮಟ್ಟತೆ ಕುರಿತು ಪರಿಶೀಲನೆ ನಡೆಸಿಕೊಂಡ ನಂತರ ಕಾಮಗಾರಿ ಬಿಲ್ಲಿನ ಮೊತ್ತ ಪಾವತಿಸಿದ್ದಲ್ಲಿ ಕಾಮಗಾರಿಗಳ ಗುಣಮಟ್ಟತೆ ಹಾಗೂ ಅನುಷ್ಠಾನಾಧಿಕಾರಿಗಳ ಹೊಣೆಗಾರಿಕೆಯನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ. ಈ ಹಿನ್ನಲೆಯಲ್ಲಿ 3ನೇ ತನಿಖಾ ವ್ಯಕ್ತಿಯನ್ನು ನೇಮಿಸುವುದು ಸೂಕ್ತವಾಗಿರುತ್ತದೆ. ಉಲ್ಲೇಖ-1 ರ ಆದೇಶದಂತೆ 3rd Party Inspection ಗಾಗಿ ನಿಗದಿಪಡಿಸಿರುವ ಶುಲ್ಕದಂತೆ ಈ ಸದ್ರಿ ಸುತ್ತೋಲೆಯಲ್ಲಿ ಸೂಚಿಸಿರುವ ಶುಲ್ಕವನ್ನು ಅಳವಡಿಸಿಕೊಂಡು ನೇಮಿಸುವುದು ಸೂಕ್ತವಾಗುತ್ತದೆ. ಆದ್ದರಿಂದ ಈ ಕೆಳಕಂಡಂತೆ ಆದೇಶಿಸಿದೆ.

| ಕ್ರ. ಸಂ. | ಕಾಮಗಾರಿಯ ಅಂದಾಜು ಮೊತ್ತ | ನಿಗಧಿಪಡಿಸಿರುವ ಕನಿಷ್ಠ ಭೇಟಿಗಳ (Inspection) ಸಂಖ್ಯೆ | ಟೆಂಡರ್‌ಗಳಲ್ಲಿ ಅಂಗೀಕರಿಸಬಹುದಾದ ಗರಿಷ್ಠ ತಪಾಸಣಾ ಶುಲ್ಕ (ಎಲ್ಲಾ ತೆರಿಗೆಗಳು ಒಳಗೊಂಡಂತೆ) |
|---|---|---|---|
| 1) | ರೂ 2.00 ಲಕ್ಷದವರೆಗೆ | ಒಂದು (ಕಾಮಗಾರಿ ಪೂರ್ಣಗೊಂಡ ನಂತರ) | ಮಂಜೂರಾದ ಅಂದಾಜು ಮೊತ್ತದ ಶೇಕಡಾ 0.5 % |
| 2) | ರೂ.2.00 ಲಕ್ಷದಿಂದ ರೂ.10.00 ಲಕ್ಷದ ವರೆಗೆ | ಎರಡು (ಕಾಮಗಾರಿಯ ಪ್ರಾರಂಭಿಕ ಹಂತದಲ್ಲಿ ಸಾಮಾಗ್ರಿಗಳ ಪರಿಶೀಲನೆ ಹಾಗೂ ಕಾಮಗಾರಿಯು ಪೂರ್ಣಗೊಂಡ ನಂತರ) | ಮಂಜೂರಾದ ಅಂದಾಜು ಮೊತ್ತದ ಶೇಕಡಾ 0.7 % |
| 3) | ರೂ.10.00 ಲಕ್ಷಕ್ಕೆ ಮೇಲ್ಪಟ್ಟು | ಮೂರು (ಕಾಮಗಾರಿಯ ಪ್ರಾರಂಭಿಕ ಹಂತದಲ್ಲಿ ಸಾಮಾಗ್ರಿಗಳ ಪರಿಶೀಲನೆ, ಕಾಮಗಾರಿಯ ಪ್ರಗತಿಯ ಹಂತದಲ್ಲಿ ಹಾಗೂ ಕಾಮಗಾರಿಯ ನಂತರ) | ಮಂಜೂರಾದ ಅಂದಾಜು ಮೊತ್ತದ ಶೇಕಡಾ 0.8 % |

Principal
Moodlakatte Institute of Technology
Moodlakatte, Kundapura - 576217
Udupi Dist, Karnataka

ಪ್ರಾಕೃತಿಕ ವಿಕೋಪ ನಿಧಿಯಲ್ಲಿ ಕೈಗೊಳ್ಳುವ ಕಾಮಗಾರಿಗೆ ಹಾಗೂ ಜಿಲ್ಲಾಧಿಕಾರಿಗಳಿಂದ ಆಡಳಿತಾತ್ಮಕ ಅನುಮೋದನೆ ಪಡೆದು ಅನುಷ್ಠಾನಗೊಳ್ಳುವಂತ ಕಾಮಗಾರಿಗಳ ಗುಣಮಟ್ಟ 3ನೇ ತನಿಖಾ ವ್ಯಕ್ತಿ/ಸಂಸ್ಥೆಯಿಂದ ತಪಾಸಣೆಗೆ ಒಳಪಡಿಸಿ ವರದಿ ನೀಡಲು ಜಿಲ್ಲೆಯಲ್ಲಿರುವ 7 ತಾಲೂಕುಗಳಿಗೆ ಸಂಬಂಧಪಟ್ಟಂತೆ ಇಲಾಖೆಗಳಲ್ಲಿನ ಕಾಮಗಾರಿಗಳ ಬಗ್ಗೆ ಮೇಲೆ ವಿವರಿಸಿರುವಂತೆ. ಈ ಕೆಳಗಿನ ತನಿಖಾ ವ್ಯಕ್ತಿ/ ಸಂಸ್ಥೆಗಳ ಎದುರುಗಡೆ ತಿಳಿಸಿರುವ ತಾಲೂಕುಗಳ ಕಾಮಗಾರಿಗಳ ತಪಾಸಣೆ ನಡೆಸಿ ತನಿಖಾ ವರದಿಯನ್ನು ನೀಡಲು ಈ ಕೆಳಕಂಡ ಷರತ್ತುಗಳನ್ವಯ ನೇಮಿಸಲಾಗಿದೆ.

| ಕ್ರ. ಸಂ | ತಾಲ್ಲೂಕಿನ ಹೆಸರು | 3ನೇ ತನಿಖಾ ಸಂಸ್ಥೆಯ ಹೆಸರು | 3ನೇ ತನಿಖಾ ವ್ಯಕ್ತಿ ವರದಿ ನೀಡಬೇಕಾದ ಕಾಮಗಾರಿಗಳ ವಿವರ |
|---|---|---|---|
| 1) | ಕಾರ್ಕಳ ತಾಲೂಕಿನ ನಗರ ವ್ಯಾಪ್ತಿ | PRINCIPAL, GOVERNMENT POLYTECHNIC KARKALA | 1) ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಕೈಗೊಳ್ಳುವ ಕಾಮಗಾರಿಗಳು<br>2) ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಯಲ್ಲಿ ಕೈಗೊಳ್ಳುವ ಕಾಮಗಾರಿಗಳು<br>3) ಪ್ರಾಕೃತಿಕ ವಿಕೋಪ ನಿಧಿಯಡಿ ಕೈಗೊಳ್ಳುವ ಕಾಮಗಾರಿಗಳು,<br>4) ನಗರ, ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕೈಗೊಳ್ಳುವ ಕಾಮಗಾರಿಗಳು<br>5) ಜಿಲ್ಲಾಧಿಕಾರಿಗಳಿಂದ ಆಡಳಿತ ಅನುಮೋದನೆ ಪಡೆಯುವ ಇತರ ಕಾಮಗಾರಿಗಳು |
| 2) | ಕಾರ್ಕಳ ತಾಲೂಕು<br>ಹೆಬ್ರಿ ತಾಲೂಕು | PRINCIPAL MANGLORE INSTITUTE OF TECHNOLOGY & ENGINEERING (MITE), MOODABIDRI | ಕರ್ನಾಟಕ ರೂರಲ್ ಇನ್ಫ್ರಾಸ್ಟ್ರಕ್ಚರ್ ಡೆವಲಪ್ ಮೆಂಟ್ ಲಿಮಿಟೆಡ್, (KRIDL) ಉಡುಪಿ ಇವರು ಅನುಷ್ಠಾನಾಧಿಕಾರಿಯಾಗಿ ಅನುಷ್ಠಾನಗೊಳಿಸುವ<br>1) ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಕೈಗೊಳ್ಳುವ ಕಾಮಗಾರಿಗಳು<br>2) ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಕೈಗೊಳ್ಳುವ ಕಾಮಗಾರಿಗಳು<br>3) ಪ್ರಾಕೃತಿಕ ವಿಕೋಪ ನಿಧಿಯಡಿ ಕೈಗೊಳ್ಳುವ ಕಾಮಗಾರಿಗಳು,<br>4) ನಗರ, ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕೈಗೊಳ್ಳುವ ಕಾಮಗಾರಿಗಳು<br>5) ಜಿಲ್ಲಾಧಿಕಾರಿಗಳಿಂದ ಆಡಳಿತ ಅನುಮೋದನೆ ಪಡೆಯುವ ಇತರ ಕಾಮಗಾರಿಗಳು |
| 3) | ಕಾರ್ಕಳ ತಾಲೂಕಿನ ಗ್ರಾಮೀಣ ವ್ಯಾಪ್ತಿ<br>ಹೆಬ್ರಿ ತಾಲೂಕು<br>ಉಡುಪಿ ತಾಲೂಕಿನ ಗ್ರಾಮೀಣ ವ್ಯಾಪ್ತಿ<br>ಕಾಪು ತಾಲೂಕು | PRINCIPAL NITTE MAHALINGA ADYANTHAYA MEMORIAL INSTITUTE OF TECHNOLOGY, (NMAMIT) NITTE | 1) ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಕೈಗೊಳ್ಳುವ ಕಾಮಗಾರಿಗಳು<br>2) ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಕೈಗೊಳ್ಳುವ ಕಾಮಗಾರಿಗಳು<br>3) ಪ್ರಾಕೃತಿಕ ವಿಕೋಪ ನಿಧಿಯಡಿ ಕೈಗೊಳ್ಳುವ ಕಾಮಗಾರಿಗಳು,<br>4) ನಗರ, ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕೈಗೊಳ್ಳುವ ಕಾಮಗಾರಿಗಳು<br>5) ಜಿಲ್ಲಾಧಿಕಾರಿಗಳಿಂದ ಆಡಳಿತ ಅನುಮೋದನೆ ಪಡೆಯುವ |

Principal
...ute of Technology
Moodlakatte, Kundapura - 576217
Udupi Dist, Karnataka

| | | | |
|---|---|---|---|
| 4) | ಉಡುಪಿ ತಾಲೂಕಿನ ನಗರಸಭಾ ವ್ಯಾಪ್ತಿ | PRINCIPAL GOVERNMENT POLYTECHNIC UDUPI PRAGATHI NAGARA MANIPAL | 1) ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಕೈಗೊಳ್ಳುವ ಕಾಮಗಾರಿಗಳು<br>2) ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಯಲ್ಲಿ ಕೈಗೊಳ್ಳುವ ಕಾಮಗಾರಿಗಳು<br>3) ಪ್ರಾಕೃತಿಕ ವಿಕೋಪ ನಿಧಿಯಡಿ ಕೈಗೊಳ್ಳುವ ಕಾಮಗಾರಿಗಳು,<br>4) ನಗರ, ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕೈಗೊಳ್ಳುವ ಕಾಮಗಾರಿಗಳು<br>5) ಜಿಲ್ಲಾಧಿಕಾರಿಗಳಿಂದ ಆಡಳಿತ ಅನುಮೋದನೆ ಪಡೆಯುವ ಇತರೆ ಕಾಮಗಾರಿಗಳು |
| 5) | ಕುಂದಾಪುರ ತಾಲೂಕು<br>ಬೈಂದೂರು ತಾಲೂಕು | PRINCIPAL MOODLAKATTE INSTITUTE OF TECHNOLOGY KUNDAPURA (MIT,) KUNDAPURA | 1) ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಕೈಗೊಳ್ಳುವ ಕಾಮಗಾರಿಗಳು<br>2) ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಕೈಗೊಳ್ಳುವ ಕಾಮಗಾರಿಗಳು<br>3) ಪ್ರಾಕೃತಿಕ ವಿಕೋಪ ನಿಧಿಯಡಿ ಕೈಗೊಳ್ಳುವ ಕಾಮಗಾರಿಗಳು,<br>4) ನಗರ, ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕೈಗೊಳ್ಳುವ ಕಾಮಗಾರಿಗಳು<br>5) ಜಿಲ್ಲಾಧಿಕಾರಿಗಳಿಂದ ಆಡಳಿತ ಅನುಮೋದನೆ ಪಡೆಯುವ ಇತರೆ ಕಾಮಗಾರಿಗಳು |
| 6) | ಉಡುಪಿ ತಾಲೂಕು<br>ಕಾಪು ತಾಲೂಕು | PRINCIPAL SHRI MADHWA VADIRAJA INSTITUTE OF TECHNOLOGY & MANAGEMENT, BANTAKAL | ನಿರ್ಮಿತಿ ಕೇಂದ್ರ ಉಡುಪಿ ಇವರು ಅನುಷ್ಠಾನಾಧಿಕಾರಿಯಾಗಿ ಅನುಷ್ಠಾನಗೊಳಿಸುವ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಕೈಗೊಳ್ಳುವ ಕಾಮಗಾರಿಗಳು / ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಯಲ್ಲಿ ಕೈಗೊಳ್ಳುವ ಕಾಮಗಾರಿಗಳು /ಪ್ರಾಕೃತಿಕ ವಿಕೋಪ ನಿಧಿಯಡಿ ಕೈಗೊಳ್ಳುವ ಕಾಮಗಾರಿಗಳು/ ನಕ್ಸಲ್ ಪೀಡಿತ ಪ್ರದೇಶದ ಕಾಮಗಾರಿಗಳು/ ಧಾರ್ಮಿಕ ದತ್ತಿ ಇಲಾಖೆಗೆ ಸಂಬಂಧಿಸಿದ ಕಾಮಗಾರಿಗಳು |

ಷರತ್ತುಗಳು:

1. Third Party Agency ಗೆ ಉಲ್ಲೇಖ-1 ರ ಆದೇಶದಂತೆ ನೀಡಬೇಕಾದ ಶುಲ್ಕವನ್ನು ಅಂದಾಜುಪಟ್ಟಿ ತಯಾರಿಸುವ ಸಂದರ್ಭದಲ್ಲೇ ಸೇರಿಸುವುದು. ಈ ಹೊಣೆಗಾರಿಕೆಯು ಆಯಾಯ ಅನುಷ್ಠಾನಾಧಿಕಾರಿಗಳದ್ದಾಗಿರುತ್ತದೆ. ಆದ್ದರಿಂದ ಈ ಸದ್ರಿ ಶುಲ್ಕವನ್ನು ಮೂಲ ಅಂದಾಜುಪಟ್ಟಿಯಲ್ಲಿ ಸೇರಿಸಿ ಇದನ್ನು ವರದಿ ನೀಡಿದ ನಂತರ ಬಿಲ್ಲು ಮೊತ್ತ ಪಾವತಿಸುವ ಸಂದರ್ಭದಲ್ಲಿ ಪಾವತಿಸುವುದು.
2. ಕಾಮಗಾರಿಯನ್ನು ಸ್ಥಳ ತನಿಖೆ ಮಾಡುವ ಮೊದಲು ಕಾಮಗಾರಿಯ ಅಂದಾಜು ಪಟ್ಟಿಯ ನಕಲನ್ನು ಸಂಬಂಧಪಟ್ಟ ಅನುಷ್ಠಾನ ಇಲಾಖೆಯಿಂದ ಪಡೆಯತಕ್ಕದ್ದು.
3. ಕಾಮಗಾರಿಗೆ ಉಪಯೋಗಿಸುವ ಎಲ್ಲಾ ರೀತಿಯ ಸಲಕರಣೆಗಳನ್ನು ಗುತ್ತಿಗೆದಾರರು ಕಾಮಗಾರಿಯ ಸ್ಥಳದಲ್ಲಿ ಶೇಖರಿಸಿರುವ ಸಲಕರಣೆಗಳಿಂದಲೇ ಸ್ಯಾಂಪಲ್‌ಗಳನ್ನು ಪಡೆಯತಕ್ಕದ್ದು.
4. ಸ್ಥಳದಲ್ಲಿ ಪಡೆದ ಸ್ಯಾಂಪಲ್‌ಗಳನ್ನು ಲ್ಯಾಬೋರೇಟರಿಯಲ್ಲಿ ಪರಿಶೀಲಿಸಿ ಕಾಮಗಾರಿಗೆ ಸದರಿ ಸಲಕರಣೆಗಳನ್ನು ಉಪಯೋಗಿಸಲು ಸೂಕ್ತವೇ ಅಥವಾ ಸೂಕ್ತವಲ್ಲದಿದ್ದಲ್ಲಿ ಸಲಕರಣೆಗಳನ್ನು ಬದಲಾಯಿಸಲು ಮತ್ತು ಬದಲಾಯಿಸಿದ

Principal
Moodlakatte Institute of Technology
Moodlakatte, Kundapura - 576217
Udupi Dist, Karnataka

5. ಕಾಮಗಾರಿ ನಡೆಯುವ ಸಮಯದಲ್ಲಿ ಮತ್ತು ಕಾಮಗಾರಿ ಮುಗಿದ ನಂತರ ಕ್ರಮವಾಗಿ ಛಾಯಾಚಿತ್ರಗಳನ್ನು ಕಾಮಗಾರಿ ಉಸ್ತುವಾರಿ ನೋಡಿಕೊಳ್ಳುವ ಅಭಿಯಂತರರೊಂದಿಗೆ ಪರಿಶೀಲನ ಸಮಯದಲ್ಲಿ ತೆಗೆಯತಕ್ಕದ್ದು.

6. ಕಾಮಗಾರಿಗಳ ಪ್ರಗತಿ ಮತ್ತು ಮುಕ್ತಾಯದ ಸಮಯದಲ್ಲಿ ತಾಂತ್ರಿಕ ವರದಿ ನೀಡುವ ಸಮಯದಲ್ಲಿ ಈ ಕೆಳಕಂಡ ಮಾಹಿತಿಯು ಒಳಗೊಂಡಿರತಕ್ಕದ್ದು.

ಎ) ಅಂದಾಜು ಪಟ್ಟಿಯಂತೆ ಕಾಮಗಾರಿ ನಿರ್ವಹಿಸಿರುವ ಬಗ್ಗೆ ಉದ್ದ, ಅಗಲ ಮತ್ತು ಎತ್ತರಗಳನ್ನು ಒಳಗೊಂಡಂತೆ ಪೂರ್ಣ ವಿವರಣೆಯ ಅಳತೆಯನ್ನು ನೀಡತಕ್ಕದ್ದು.

ಬಿ) ಕಾಮಗಾರಿಯನ್ನು ಉಸ್ತುವಾರಿ ನೋಡಿಕೊಳ್ಳುವ ಅಭಿಯಂತರರಿಂದ ಅಳತೆಗಳನ್ನು ತಯಾರಿಸಿರುವ ಅಳತೆ ಪುಸ್ತಕದಂತೆ ಅಳತೆಗಳನ್ನು ಪರಿಶೀಲಿಸಿ ಹಾಗೂ ವ್ಯತ್ಯಾಸವಿದ್ದಲ್ಲಿ ಇಬ್ಬರೂ ಚರ್ಚಿಸಿ ನಿಖರವಾದ ನಿರ್ಧಿಷ್ಟವಾದ ಅಳತೆಗಳನ್ನು ನೀಡತಕ್ಕದ್ದು.

ಸಿ) ಕಾಮಗಾರಿಯ ಅಂದಾಜು ಮೊತ್ತ ಉದಾಹರಣೆಗೆ ರೂ.5.00 ಲಕ್ಷಗಳಿದ್ದು, ಗುತ್ತಿಗೆದಾರರು ಕಾಮಗಾರಿಯನ್ನು ಸ್ಥಳದಲ್ಲಿ ರೂ.4.50 ಲಕ್ಷಗಳಿಗೆ ನಿರ್ವಹಿಸಿದಲ್ಲಿ ಉಳಿಕೆ ಮೊತ್ತ ನಿರ್ವಹಿಸುವ ಬಗ್ಗೆ ಸಂಬಂಧಿಸಿದ ಇಲಾಖೆಗೆ ಮತ್ತು ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸತಕ್ಕದ್ದು.

7. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮೂರನೇ ತನಿಖಾ ವ್ಯಕ್ತಿಯು ಕಾಮಗಾರಿಯು ತೃಪ್ತಿಕರವಾಗಿ ಪೂರ್ಣಗೊಂಡಿರುತ್ತದೆ ಎಂದು ವರದಿ ನೀಡಿ, ಒಂದು ವೇಳೆ ಕಾಮಗಾರಿಯು ಕಳಪೆ ಆಗಿದ್ದಲ್ಲಿ, ಅಳತೆಗಳ ವ್ಯತ್ಯಾಸವಿದ್ದಲ್ಲಿ ಕಾಮಗಾರಿಯು ನಡೆಯದೇ ಇದ್ದು, ಕಾಮಗಾರಿ ನಡೆದಿದೆ ಎಂದು ವರದಿ ನೀಡಿದ್ದಲ್ಲಿ, ಅಂತಹ 3ನೇ ತನಿಖಾ ವ್ಯಕ್ತಿಯ ವಿರುದ್ಧ ಕ್ರಿಮಿನಲ್ ಕೇಸ್‌ನ್ನು ನ್ಯಾಯಾಲಯದಲ್ಲಿ ಹೂಡಲಾಗುತ್ತದೆ. ಎಂಬುದನ್ನು ತಿಳಿಯತಕ್ಕದ್ದು.

8. ನೇಮಿಸಿರುವ 3ನೇ ತನಿಖಾ ವ್ಯಕ್ತಿಗಳ ಅವಧಿಯನ್ನು ಮುಂದಿನ ಆದೇಶದವರೆಗೆ ಮುಂದುವರಿಸಲಾಗಿದೆ.

9. ಪೌರಾಯುಕ್ತರು/ಮುಖ್ಯಾಧಿಕಾರಿಗಳು/ಸಹಾಯಕ ಕಾರ್ಯಪಾಲಕ ಅಭಿಯಂತರರು/ ಸಹಾಯಕ ಅಭಿಯಂತರರು/ಕಿರಿಯ ಅಭಿಯಂತರರಿಗೆ ತಿಳಿಸುವುದೇನೆಂದರೆ ಕಾಮಗಾರಿಯು ಪೂರ್ಣಗೊಂಡ ನಂತರ ಕಾಮಗಾರಿಯ ಸ್ಥಳದಲ್ಲಿ ನಾಮಫಲಕವನ್ನು ಕಡ್ಡಾಯವಾಗಿ ಅಳವಡಿಸತಕ್ಕದ್ದು. ನಾಮಫಲಕ ಅಳವಡಿಸಿದ ಬಗ್ಗೆ ಛಾಯಾಚಿತ್ರವನ್ನು ತೆಗೆದು ಕಡತದಲ್ಲಿ ಇರಿಸತಕ್ಕದ್ದು.

10. 3ನೇ ತನಿಖಾ ವ್ಯಕ್ತಿಯು ಕಾಮಗಾರಿಯನ್ನು ಪರಿಶೀಲಿಸಿ ನೀಡುವ ವರದಿಯಲ್ಲಿ ಕಾಮಗಾರಿಯು ಪೂರ್ಣಗೊಂಡಿದ್ದು, ಸದ್ರಿ ಅಂದಾಜು ಮೊತ್ತದಲ್ಲಿ ಇನ್ನು ಉಳಿಕೆ ಇದ್ದಲ್ಲಿಯೂ ಸಹಾ ತನಿಖಾ ವ್ಯಕ್ತಿಗಳಿಗೆ ಅಂದಾಜು ಪಟ್ಟಿಯ ಮೊತ್ತಕ್ಕೆ ತನಿಖಾ ಶುಲ್ಕವನ್ನು ಪಾವತಿಸಕ್ಕದ್ದು. ಕಾರಣ 3ನೇ ತನಿಖಾ ವ್ಯಕ್ತಿಗಳ ವರದಿಯಲ್ಲಿ ನಕಾರಾತ್ಮಕ ವರದಿ ( *To Prevent the negative incentive for reporting more work when less work is actually done*) ನೀಡಬಾರದೆಂಬ ಉದ್ದೇಶದಿಂದ ಸೂಚಿಸಲಾಗಿರುತ್ತದೆ.

11. 3ನೇ ತನಿಖಾ ವ್ಯಕ್ತಿಗೆ ನೀಡುವ ತನಿಖಾ ಶುಲ್ಕವನ್ನು ಮೂಲ ಅಂದಾಜು ಪಟ್ಟಿಯಲ್ಲಿಯೇ ಸೇರಿಸಲು ಸೂಚಿಸಲಾಗಿರುತ್ತದೆ. ಹಾಗೂ 3ನೇ ತನಿಖಾ ವ್ಯಕ್ತಿಯನ್ನು ತಮ್ಮ ತಮ್ಮ ಇಲಾಖೆಗಳಿಂದ ಕರಾರುಗಳನ್ನು ಮಾಡಿಕೊಳ್ಳತಕ್ಕದ್ದು.

12. ಆಯ್ಕೆಯಾದ *Third Party Agency* ಯೊಂದಿಗೆ ಸಂಬಂಧಿಸಿದ ಅನುಷ್ಠಾನದ ಇಲಾಖೆಯ ಅಧಿಕಾರಿಗಳು ಕರಾರು ಮಾಡಿಕೊಳ್ಳುವುದು.

13. ಕಾಮಗಾರಿ ಪ್ರಾರಂಭವಾಗುವ ಮೊದಲು ಮತ್ತು ಪ್ರಾರಂಭವಾದ ನಂತರ ಪ್ರಗತಿ ಹಂತದಲ್ಲಿರುವ ಹಾಗೂ ಕಾಮಗಾರಿ ಮುಕ್ತಾಯವಾದ ನಂತರ ಹೀಗೆ 3 ಹಂತಗಳ( ಪ್ರಾರಂಭ,ಪ್ರಗತಿ,ಮುಕ್ತಾಯ) ಸ್ಪಷ್ಟವಾದ ಭಾವಚಿತ್ರಗಳನ್ನು (*Geo-Fencing (Lattitude and Longitude)* ಭಾವಚಿತ್ರದೊಂದಿಗೆ) ಹಾಗೂ ಸದ್ರಿ ಭಾವಚಿತ್ರದಲ್ಲಿ ಕಾಮಗಾರಿಯ ಪ್ರತೀ ಹಂತದಲ್ಲಿ ಕಾಮಗಾರಿಯ ಸ್ಥಳ ಪರಿಶೀಲನೆಗೆ ತೆರಳಿದ ಇಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್ ಕಾಲೇಜುಗಳ ತಾಂತ್ರಿಕ ಸಿಬ್ಬಂದಿಯ ಜೊತೆ ಹಾಗೂ ಇಲಾಖೆಯ ಕಾರ್ಯನಿರ್ವಾಹಕ ಇಂಜಿನಿಯರ್ /ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರುಗಳ ಹಾಜರಿರುವ ಬಗ್ಗೆ ಭಾವಚಿತ್ರಗಳನ್ನು ದೃಢೀಕರಿಸಿ ಸಲ್ಲಿಸುವುದು.

14. ಕಾಮಗಾರಿ ಮುಕ್ತಾಯವಾದ ನಂತರ ಕಾಮಗಾರಿ ನಡೆದ ಸ್ಥಳದಲ್ಲಿ ನಿಖರವಾದ ಹಾಗೂ ಸ್ಪಷ್ಟವಾದ ಶಾಶ್ವತ ನಾಮಫಲಕವನ್ನು ಹಾಕುವುದು ಹಾಗೂ ಬಿಲ್ಲು ಕಡತದಲ್ಲಿ ಶಾಶ್ವತ ನಾಮಫಲಕ ಅಳವಡಿಸಿರುವ ಬಗ್ಗೆ ಮೂರನೇ ತಪಾಸಣಾ ಸಂಸ್ಥೆಯವರು ಪರಿಶೀಲಿಸಿ ಭಾವಚಿತ್ರದೊಂದಿಗೆ ದೃಢೀಕರಿಸುವುದು.

Principal
Moodlakatte Institute of Technology
Moodlakatte, Kundapura - 576217
Udupi Dist, Karnataka

10. ಪೌರಾಯುಕ್ತರು, ನಗರಸಭೆ ಉಡುಪಿ
11. ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ರಜತಾದ್ರಿ, ಮಣಿಪಾಲ
12. ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ರಜತಾದ್ರಿ, ಮಣಿಪಾಲ
13. ತಹಶೀಲ್ದಾರ್: ಉಡುಪಿ, ಕುಂದಾಪುರ, ಕಾರ್ಕಳ, ಬ್ರಹ್ಮಾವರ, ಬೈಂದೂರು, ಕಾಪು ಮತ್ತು ಹೆಬ್ರಿ
14. ಸಹಾಯಕ ಕಮೀಷನರ್, ಹಿಂದೂ ಮತ್ತು ಧಾರ್ಮಿಕ ದತ್ತಿ ಇಲಾಖೆ, ರಜತಾದ್ರಿ, ಮಣಿಪಾಲ
15. ಯೋಜನಾ ಸಮನ್ವಯಾಧಿಕಾರಿ, ಸಮಗ್ರ ಗಿರಿಜನ ಅಭಿವೃದ್ಧಿ ನಿಗಮ ರಜತಾದ್ರಿ, ಮಣಿಪಾಲ
16. ಮುಖ್ಯಾಧಿಕಾರಿ ಪುರಸಭೆ: ಕಾಪು, ಕುಂದಾಪುರ, ಕಾರ್ಕಳ
17. ಮುಖ್ಯಾಧಿಕಾರಿ ಪಟ್ಟಣ ಪಂಚಾಯತ್ ಸಾಲಿಗ್ರಾಮ, ಬೈಂದೂರು
18. ಯೋಜನಾ ನಿರ್ದೇಶಕರು, ನಿರ್ಮಿತಿ ಕೇಂದ್ರ, ಮಣಿಪಾಲ
19. ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಸಮುದ್ರ ಕೊರೆತ ನಿಯಂತ್ರಣ ವಿಭಾಗ ಉಡುಪಿ

ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:

1. ಧಾರ್ಮಿಕ ದತ್ತಿ ತಹಶೀಲ್ದಾರರು ಮತ್ತು ಅಧೀಕ್ಷಕರು ಸಿ ಶಾಖೆ

Principal
Moodlakatte Institute of Technology
Moodlakatte, Kundapura - 576217
Udupi Dist, Karnataka

Office of the Collector
and District Magistrate Udupi District,
"Rajatadri" to Chhap, DA - 576104
Email: ಉ udupidc@gmail.com

(Revenue Department)

Deputy Commissioner &
District Magistrate's Office,
Udupi District, " Rajatadri",
Manipal, Udupi - 576104
Office: 0820-2574924, 2574925

DCU/KLLADS MLA 184/207-18/85286/13273 ದಿನಾಂಕ: 19-09-2022

## Proceedings of the Collector, Udupi District, Udupi

Topic: Appointment of Members of Parliament and MLAs for 3rd Party Inspection of Local Area Development Schemes, Works under Natural Disaster Fund and works subject to administrative approval from District Collectors.

Reference : 1) Under Secretary to Government, Ministry of Government of Karnataka, Vikasasoudha. Bangalore Circular No. : NAE :21 : GEL 2009 Bangalore 9 ದಿನಾಂ 11.02.2009

2) Date: Resolution of the meeting held on 16.09.2022

* * * * * *

As related to the above matter, it has been decided to appoint members of Parliament and MLAs for 3 Pariy Inspection of local area development plan, works that can be carried out under natural calamity fund and works that get administrative approval from the District Collector. This is because after checking the quality of the works, if the amount of the work bill is paid, the quality of the works and the accountability of the officials can be increased. In this context it is advisable to appoint a 3rd investigation person. Reference ! It would be appropriate to adopt and appoint the fee prescribed in this circular as the fee prescribed for 3d Party Inspection as per the order of So ordered as follows.

| Cr. no. | Estimated amount of work | Minimum number of visits (Inspection) prescribed | In tenders Maximum inspection fee admissible (inclusive of all taxes) |
|---|---|---|---|
| 1) | Up to Rs 2.00 lakh | A (after completion of work) | 0.5% of the estimated amount sanctioned |
| 2) | From Rs.2.00 lakh to Rs.10.00 lakh | Two (inspection of materials at initial stage of work and after completion of work) | 0.7 % of the estimated amount sanctioned |
| 3) | Above Rs.10.00 lakh | Three (inspection of materials at initial stage of work. During progress of work and after work) | Estimated amount sanctioned ಶೇಕಡಾ 0.8 % |

Moodlakatte Institute of Technology
Moodlakatte. Kundapura – 576217,
Udupi Dist, Karnataka

As described above about the works in the departments concerned for the 7 taluks in the district to be inspected by the 3rd investigative person/organization for the quality of the works to be carried out under the Natural Disaster Fund and to be carried out after obtaining administrative approval from the District Collector. The following investigating persons have been appointed under the following conditions to inspect the works of the said taluks opposite the institutions and to submit an investigation report.

| ಕ್ರ. no | Taluk Name | Name of 3rd Investigating Agency | Details of works to be reported by 3rd Investigating Person |
|---|---|---|---|
| 1) | Urban area of Karkala Taluk | *PRINCIPAL, GOVERNMENT POLYTECHNIC KARKALA* | 1) Works undertaken under MLA Local Area Development Scheme<br>2) Works undertaken under Local Area Development Scheme of MP<br>3) Works undertaken under Natural Disaster Fund,<br>4) Works carried out within the scope of city, local bodies<br>5) Other works for which administrative approval is obtained from the District Collector |
| 2) | Karkala Taluk<br>Hebri Taluk | *PRINCIPAL MANGLORE INSTITUTE OF TECHNOLOGY & ENGINEERING (MITE), MOODABIDRI* | KARNATAKA RURAL INSTRUCTOR DEVELOPMENT LIMITED, (KRIDL) Udupi who is acting as Director.<br>1) Works undertaken under MLA Local Area Development Scheme<br>2) Works undertaken under Local Area Development Scheme of MP<br>3) Works undertaken under Natural Disaster Fund,<br>4) Works carried out within the scope of city, local bodies<br>5) Other works for which administrative approval is obtained from the District Collector |
| 3) | Rural area of Karkala Taluk<br>Hebri Taluk<br>Rural area of Udupi Taluk<br>Kapu Taluk | *PRINCIPAL* NINETEEN MAHALINGA ADYANTHAYA MEMORIAL INSTITUTE OF TECHNOLOGY, (NMAMIT) NINETEEN | 1) Works undertaken under MLA Local Area Development Scheme<br>2) Works undertaken under Local Area Development Scheme of MP<br>3) Works undertaken under Natural Disaster Fund,<br>4) High-value of Technology works under City, Local bodies Moodlakatte,<br>5) [illegible] |

Principal
Kundapura - 576217 Udupi Dist, Karnataka

| | | | |
|---|---|---|---|
| 4) | Municipal council area of Udupi taluk | *PRINCIPAL GOVERNMENT* POLYTECHNIC UDUPI PRAGATHI NAGARA MANIPAL | 1) Works undertaken under MLA Local Area Development Scheme<br>2) Works undertaken under Local Area Development Scheme of MP<br>3) Works undertaken under Natural Disaster Fund.<br>4) Works carried out within the scope of city, local bodies<br>5) Other works for which administrative approval is obtained from the Collector |
| 5) | Kundapur Taluk<br>Byndur Taluk | PRINCIPAL MOODLAKATTE INSTITUTE OF TECHNOLOGY KUNDAPURA (MIT) KUNDAPURA | 1) Works undertaken under MLA Local Area Development Scheme<br>2) Works undertaken under Local Area Development Scheme of MP<br>3) Works undertaken under Natural Disaster Fund,<br>4) Works carried out within the scope of city, local bodies<br>5) Other works for which administrative approval is obtained from the District Collector |
| 6) | Udupi Taluk<br>Kapu Taluk | *PRINCIPAL SHRI MADHWA VADIRAJA INSTITUTE OF TECHNOLOGY & MANAGEMENT, BANTAKAL* | Nirmithi Kendra Udupi is the implementing officer<br>Works undertaken under MLA's Local Area Development Scheme / Works undertaken under MP's Local Area Development Scheme / Under Natural Disaster Fund \| Works Works in Naxal Affected Area:<br>Works related to Religious Endowment Department |

Conditions:

1. To include the fee payable to the Third Party Agency as per reference-1 while preparing the estimate. This responsibility rests with the respective trustees. Therefore, this fee should be included in the original estimate and paid at the time of bill payment after reporting.
2. A copy of the estimate list of the work shall be obtained from the concerned Anushtana Department before carrying out site inspection of the work.
3. All types of equipment used in the work shall be sampled by the contractor from the equipment stored at the work site.
4. Check the samples obtained at the site in the laboratory to see if they are suitable for use in the work or to replace and change the equipment if it is not sensitive.

Principal
Moodlakatte Institute of Technology
Equipment katte, Kundapura - 576217
Udupi Dist, Karnataka

5. Photographs shall be taken at the time of inspection with the engineer in charge of the work during the execution of the work and after completion of the work respectively.

6. At the time of giving technical report on progress and completion of works as follows Information to be included.

a) Full description measurements including length, width and height of work carried out as per estimate list shall be given.

b) Check the measurements as per the measurement book prepared by the engineer in charge of the work and if there is any discrepancy both of them shall discuss and give the exact specified measurements.

c) Estimated amount of work eg Rs.5.00 lakhs, contractor to do the work. If Rs.4.50 lakhs are managed on the spot, a report should be submitted to the concerned department and the Collector regarding the management of the remaining amount.

7. In respect of the works, the third inspection person shall report that the work has been completed satisfactorily, if the work is defective, if there is discrepancy in measurements, the work shall not be carried out, and if the work shall be reported as done. A criminal case will be filed in court against such 3rd investigating person. It should be known.

8. The tenure of the appointed 3rd investigating persons has been extended till further orders.

9. Civic Commissioners/Chief Officers/ Assistant Executive Engineers Assistant Engineers inform Junior Engineers that after the completion of the work nameplate shall be mandatorily installed at the work site. A photograph of the installation of the name plate should be taken and kept on file.

10. In the report issued by the 3rd surveying person, the work has been completed and the surveying fee shall be paid to the surveying persons for the amount of the estimated list, even if there is any balance in the said estimate. Reason In the report of the 3rd investigative persons, negative report (To Prevent the negative incentive for reporting more work when less work is actually ಡಬಾರದೆಂಬ done) is indicated by the purpose of J.

11. Investigation fee payable to the 3rd investigation person is suggested to be included in the original estimate itself. And the 3rd investigation person should be contracted by their respective departments.

12. To enter into an agreement with the selected Third Party Agency by the officials of the Anushtana Department.

13. Before the commencement of the work and after the commencement of the work in progress and after the completion of the work, clean photographs (with Geo-Fencing (Latitude and Longitude) photograph) of the 3 stages (start, progress, completion) and in the said photograph, Engineering and Polytechnic who went to inspect the site of the work at each stage of the work. Submitting photographs attesting the presence of Technical Staff of Colleges and Executive Engineers/Assistant Executive Engineers of the Department.

14. After the completion of the work, accurate and clean Shakrit Principal nameplate should be placed at the work site and the permanent nameplate should be checked and confirmed with a photograph by the Muridate of Technology inspection agency in the bill file.

Moodlakatte, Kundapura - 576217
Udupi Dist, Karnataka

1). Municipal Commissioner, Udupi Municipality

11. Deputy Director, Social Welfare Department. Rajatadri Manipal

12. District Officer, Backward Classes Welfare Department Rajatadri Manipal

13. Tehsildar: Udupi, Kundapur, Karkala, Brahmavar, Byndur, Kapu and Hebri

14. Assistant Commissioner, Hindu and Religious Endowment Department, Rajatadri Manipal

15. Project Coordinator, Integrated Village Development Corporation Rajatadri Manipal

16. Head Municipality: Kapu, Kundapur, Karkala

17. Head Officer Town Panchayat Saligram, Byndur

18. Project Director, Nirmithi Kendra, Manipal

19. Assistant Executive Engineer, Minor Irrigation and Sea Dredging Control Division, Udupi

For copy information and appropriate action:

1. Tahsildars and Superintendents of Religious Endowments c

Principal
Moodlakatte Institute of Technology
Moodlakatte, Kundapura-576217
Udupi Dist, Karnataka